## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 286 |
| 2 | ಸದಸ್ಯರ ಹೆಸರು | : | ಡಾ॥ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | : | 06-07-2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಿಲ್ಲೆ, ದಾಸರಹಳ್ಳಿ, ಯಶವಂತಪುರ ಹೋಬಳಿ, ಚೊಕ್ಕಸಂದ್ರ ಗ್ರಾಮದ ಅಸೆಸ್‌ಮೆಂಟ್ ನಂ. 1/3ರ ದಕ್ಷಿಣದಿಂದ ಪ್ರಾರಂಭವಾಗಿ ಪಶ್ಚಿಮದ ಕಡೆಗೆ ಹಾಗೂ ಅಕ್ಕಪಕ್ಕದ ಇತರೆ ಮನೆಗಳಿಗೆ ಹೊಂದಿಕೊಂಡಂತೆ ನಿರ್ಮಿಸಲಾಗಿರುವ ಡ್ರೈನೇಜ್ ಅನ್ನು ಕಾಲುವೆಯ ರೀತ್ಯಾ ತುಂಬಾ ಆಳವಾಗಿ ಅಗೆದಿರುವುದರಿಂದ ಅಲ್ಲಿರುವ ಸುತ್ತಮುತ್ತಲಿನ ಮೋರಿಗಳ ನೀರು ಹಾದು ಹೋಗುವಂತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸುಮಾರು ವರ್ಷಗಳಿಂದಲೂ ಸದರಿ ಡ್ರೈನೇಜನ್ನು ಮುಚ್ಚದಿರುವುದರಿಂದ ಅಲ್ಲಿ ವಾಸಿಸುತ್ತಿರುವ ನಾಗರೀಕರುಗಳಿಗೆ, ಸದರಿ ರಸ್ತೆಯಲ್ಲಿ ಆಟವಾಡುವ ಮಕ್ಕಳಿಗೆ ಇದರ ದುರ್ವಾಸನೆ, ಸೊಳ್ಳೆಗಳಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದಲ್ಲದೆ, ಸದರಿ ಡ್ರೈನೇಜ್ ಸಡಿಲವಾಗಿರುವುದರಿಂದ ಮುಂದಿನ ದಿನಗಳಲ್ಲಿ ಅಲ್ಲಿ ನಿರ್ಮಾಣವಾಗಲಿರುವ ಹಾಗೂ ನಿರ್ಮಾಣವಾಗಿರುವ ಮನೆಗಳಿಗೂ ಸಹ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಸದರಿ ಡ್ರೈನೇಜ್‌ನ ಮೇಲೆ ಕಂಬಿ ಕಟ್ಟಿ ಕಾಂಕ್ರೀಟ್ ಅಳವಡಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು? | ಈ ಸ್ಥಳದ ಮತ್ತು ಸುತ್ತಮುತ್ತಲಿನ ರಸ್ತೆಗಳಲ್ಲಿ ಚರಂಡಿ ನಿರ್ಮಾಣ ಮಾಡಲು ಬಿಬಿಎಂಪಿಯಿಂದ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.25.00 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಆದರೆ, ಈ ಕಾಮಗಾರಿ ನಿರ್ವಹಿಸುವ ಕಾಲುವೆಯಲ್ಲಿ ಹಾಳಾಗಿದ್ದ ಒಳಚರಂಡಿ (ಯು.ಜಿ.ಡಿ) ಸಂಪರ್ಕವನ್ನು ದುರಸ್ಥಿಪಡಿಸಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಕಾಲಾವಕಾಶ ಪಡೆದಿದ್ದರಿಂದ, ಬಿಬಿಎಂಪಿಯ ಕಾಮಗಾರಿ ವಿಳಂಬವಾಗಿರುತ್ತದೆ. ಪ್ರಸ್ತುತ, ದಿನಾಂಕ: 15-02-2023 ರಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಒಳಚರಂಡಿ ಸಂಪರ್ಕವನ್ನು ದುರಸ್ಥಿಪಡಿಸಿದ್ದು, ಪ್ರಸ್ತುತ, ಬಿಬಿಎಂಪಿಯಿಂದ ಈ ಚರಂಡಿಗೆ ತುರ್ತಾಗಿ ಕಂಬಿ ಕಟ್ಟಿ ಕಾಂಕ್ರೀಟ್ ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ನಅಇ 266 ಎಂಎನ್‌ವೈ 2023 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ